<u>ಸಿ.ಸಿ. ನಂ. **೫೯೪/೨೦೧೪**</u>

<u>ಸಾಕ್ಷಿಯನ್ನು ಇಂದು ದಿನಾಂಕ **೦೯.೦೨.೨೦೨೧** ರಂದು ಪುನಃ ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.</u>

**<u>ಪಾಟೀ ಸವಾಲುಃ ಆರೋಪಿತರ ಪರ</u>** <u>ಎಂ.ಎಸ್.ಹೆಚ್.</u> **<u>ವಕೀಲರಿಂದ</u>**

ಆರೋಪಿತರ ಮತ್ತು ನನ್ನ ನಡುವೆ ಯಾವುದೇ ವ್ಯವಹಾರ ಇರುವುದಿಲ್ಲ, ಹಾಗೂ ಯಾವುದೇ ರೀತಿ ಸಂಬಂಧ ಕೂಡ ಇರುವುದಿಲ್ಲ. ಆರೋಪಿ ೨ ತಿಂಗಳಿನಿಂದ ಹುಡುಕಾಡುತ್ತಿದ್ದೇನೆ ಎಂದು ಹೇಳಿದ್ದು ನಿಜ ಆದರೆ ನನಗೂ ಆರೋಪಿತರಿಗೂ ಯಾವುದೇ ಸಂಬಂಧ ಇರುವುದಿಲ್ಲ. ನಾನು ಹೇಳಿದಂತೆ ಆರೋಪಿತರು ನನ್ನನ್ನು ಎರಡು ತಿಂಗಳಿನಿಂದ ಹುಡುಕಾಡುತ್ತಿದ್ದೇನೆ ಎಂದು ಹೇಳಿಲ್ಲ ಎಂದರೆ ಸರಿ ಅಲ್ಲ. ಅಂದು ರಾತ್ರಿ ನಾನು ಊಟ ತರಲು ಹೋದಾಗ ಹೋಟಲಿನಲ್ಲಿ ಸಾಕಷ್ಟು ಜನ ಇದ್ದರು. ೯-೧೦ ಜನ ಇದ್ದರು. ಅಲ್ಲಿ ಇದ್ದವರ ಹೆಸರು ಹೇಳಲು ಬರುವುದಿಲ್ಲ. ಆ ದಿನ ನಾನು ಘಟನಾ ಸ್ಥಳ ಹೋಟಲಿಗೆ ಹೋಗಿಲ್ಲ, ಘಟನೆ ಆಗಿಲ್ಲ, ಹಾಗಾಗಿ ಅಲ್ಲಿ ಇದ್ದವರು ಯಾರು ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿ ಅಲ್ಲ. ಘಟನೆ ಆದ ನಂತರ ಪೋಲಿಸ್ ಠಾಣೆಗೆ ನನ್ನನ್ನು ನನ್ನ ಮಾವ ಚಂದಪ್ಪ ಯಂಕಂಚಿ, ಮತ್ತು ಇನ್ನಿತರರು ಜೀಪಿನಲ್ಲಿ ಕರೆದುಕೊಂಡು ಹೋಗಿರುತ್ತಾರೆ. ನಂತರ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಚಂದಪ್ಪ ಯಂಕಂಚಿ ಜೊತೆಗೆ ಲಕ್ಷ್ಮಣ, ಇಬ್ಬರು ಮುಸಲ್ಮಾನ ಸಮುದಾಯದವರು ಇದ್ದರು ಅವರ ಹೆಸರು ಹೇಳಲು ಬರುವುದಿಲ್ಲ. ಆ ದಿನ ನಾನು ಜೀಪಿನಲ್ಲಿ ಪೋಲಿಸ್ ಠಾಣೇಗೆ ಹೋಗಿಲ್ಲ ಆದ್ದರಿಂದ ನನ್ನನ್ನು ಕರೆದುಕೊಂಡು ಹೋದವರ ಹೆಸರು ಹೇಳಲು ನನಗೆ ಬರುತ್ತಿಲ್ಲ ಎಂದರೆ ಸರಿ ಅಲ್ಲ. ನಾನು ಕಮಾಂಡರ್ ಜೀಪಿನಲ್ಲಿ ಹೋಗಿರುತ್ತೇನೆ. ಜೀಪಿನ ಮಾಲೀಕ ಯಾರು ಮತ್ತು ಅದರ ನಂಬರ್ ಏನು ಎಂದು ಹೇಳಲು ಬರುವುದಿಲ್ಲ ಏಕೆಂದರೆ ನಾನು ಅರೆ ಪ್ರಜ್ಞಾವಸ್ಥೆಯಲ್ಲಿ ಇದ್ದೆನು. ಆ ದಿನ ಜೀಪಿನಲ್ಲಿ ಹೋಗಿಲ್ಲದೇ ಇರುವುದರಿಂದ ಅದರ ಮಾಲಿಕನ ಹೆಸರು ಮತ್ತು ಜೀಪಿನ ನಂಬರ್ ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿ ಅಲ್ಲ. ಪೋಲಿಸ್ ಠಾಣೇಗೆ ಹೋದ ನಂತರ ಪೋಲಿಸರು ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ಹೇಳಿರುತ್ತಾರೆ.

ನಿಂಬರ್ಗಾದಲ್ಲಿ ಸರಕಾರಿ ಆಸ್ಪತ್ರೆ ಇದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಜೊತೆ ಆ ದಿನ ಪೋಲಿಸರು ಆಸ್ಪತ್ರೆಗೆ ಬಂದಿದ್ದರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಘಟನೆ ಆದ ರಾತ್ರಿಯೇ ನನ್ನನ್ನು ಆಸ್ಪತ್ರೆಗೆ ದಾಖಲು ಮಾಡಿದ್ದಾರೆ. ಆ ದಿನ ಘಟನೆ ನಡೆದಿರಲಿಲ್ಲ ಮತ್ತು ನನಗೆ ಯಾವುದೇ ಪೆಟ್ಟು ಆಗಿರಲಿಲ್ಲ ಹಾಗಾಗಿ ನಾನು ನಿಂಬರ್ಗಾ ಸರಕಾರಿ ಆಸ್ಪತ್ರೆಗೆ ಹೋಗಿಲ್ಲ ಎಂದರೆ ಸರಿ ಅಲ್ಲ. ನಾನು ದೂರದರ್ಶನದಲ್ಲಿ ಕೆಲಸ ಮಾಡುತ್ತಿರುವುದರಿಂದ ನನ್ನ ಪ್ರಭಾವ ಬಳಸಿ ಬಸವೇಶ್ವರ ಆಸ್ಪತ್ರೆಯಿಂದ ಸುಳ್ಳು ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡಿದ್ದೇನೆ ಎಂದರೆ ಸರಿ ಅಲ್ಲ. ನಾನು ಬಸವೇಶ್ವರ ಆಸ್ಪತ್ರೆಯಲ್ಲಿ ದಾಖಲಾದ ೨-೩ ದಿನಗಳ ನಂತರ ಪೋಲಿಸರು ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ. ಪೋಲಿಸರು ಮಾತ್ರ ಬಂದಿದ್ದರು, ಮುಖ್ಯಪೇದೆ, ಪಿ.ಎಸ್.ಐ. ರವರು ಬಂದಿದ್ದರೋ ಇಲ್ಲವೋ ನೆನಪಿಲ್ಲ. ಆಸ್ಪತ್ರೆಯಲ್ಲಿ ನನ್ನ ಸಮಕ್ಷಮ ಯಾವುದೇ ವಸ್ತುವನ್ನು ಪೋಲಿಸರು ಜಪ್ತಿಪಡಿಸಿಕೊಂಡಿಲ್ಲ. ನನ್ನನ್ನು ಕರೆಸಿ ಕೂಡ ಪೋಲಿಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಜಪ್ತಿಪಡಿಸಿಕೊಂಡಿಲ್ಲ. ಮು.ಮಾ-೧ ರಂತಹ ರಾಡುಗಳು ಎಲ್ಲಾ ಕಡೆ ಸಿಗುತ್ತವೆ ಎಂದರೆ ಸರಿ. ಪ್ರಕರಣ ಆಗಿ ೫ ವರ್ಷಗಳ

ನಂತರ ಪ್ರಕರಣಕ್ಕೆ ಅನುಕೂಲವಾಗುವಂತೆ ಪೋಲಿಸರು ಈಗ ಮು.ಮಾ.೧ ನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದಾರೆ ಎಂದರೆ ಸರಿ ಅಲ್ಲ. ಫಿರ್ಯಾದಿಯಲ್ಲಿ ವಯಸ್ಸು ೩೯ ಇದೆ, ಗಾಯದ ಪ್ರಮಾಣ ಪತ್ರದಲ್ಲಿ ವಯಸ್ಸು ೩೮ ಇದೆ ಹಾಗಾಗಿ ಗಾಯದ ಪ್ರಮಾಣ ಪತ್ರ ನನ್ನದಲ್ಲ ಎಂದರೆ ಸರಿ ಅಲ್ಲ.

ನಾನು ಹೇಳಿದ ಸ್ಥಳದಲ್ಲಿ ಜೀವನ ಎಂಬ ಖಾನಾವಳಿ ಇಲ್ಲ ಎಂಥರೆ ಸರಿ ಅಲ್ಲ. ಈಗ ಇಲ್ಲ ಘಟನೆ ನಡೆಯುವ ವೇಳೆಯಲ್ಲಿ ಇತ್ತು ಎಂದು ಸಾಕ್ಷಿ ನುಡಿಯುತ್ತಾರೆ. ಘಟನೆ ನಡೆಯುವ ಸ್ಥಳದಲ್ಲಿ ಅಂದಿನಿಂದಲೂ ಖಾನಾವಳಿ ಇರಲಿಲ್ಲ ಎಂದರೆ ಸರಿ ಅಲ್ಲ. ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಫಿರ್ಯಾದಿಯಲ್ಲಿ ನಾನು ಅರೆ ಪ್ರಜ್ಞಾವಸ್ಥೆಯಲ್ಲಿದ್ದೆ ಎಂದು ನಾನು ಹೇಳಿ ಬರೆಸಿದ್ದೇನೆ. ಅರೆ ಪ್ರಜ್ಞಾವಸ್ಥೆಯಲ್ಲಿ ಇದ್ದೆ ಎಂದು ಫಿರ್ಯಾದಿಯಲ್ಲಿ ನಾನು ಹೇಳಿಲ್ಲ ಎಂದರೆ ಸರಿ ಅಲ್ಲ. ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ೨ ನೇ ಆರೋಪಿ ನನ್ನನ್ನು ಅವಾಚ್ಯ ಶಬ್ದಗಳಿಂದ ಬೈದು ಎಂದು ಸುಳ್ಳು ಹೇಳುತ್ತಿದ್ದೇನೆ ಎಂಥರೆ ಸರಿ ಅಲ್ಲ. ೨ ನೇ ಆರೋಪಿ ನನ್ನ ಕೈ ಮುಗುಚಿ ಹೊಟ್ಟೆಗೆ ಮತ್ತು ಬೆನ್ನಿನ ಮೇಲೆ ಹೊಡೆದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ೧ ನೇಆರೋಪಿ ರಾಡಿನಿಂದ ನನ್ನ ತಲೆಯ ಮೇಲೆ ಮತ್ತು ಭುಜದ ಮೇಲೆ ಹೊಡೆದನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ಆರೋಪಿತರು ನನ್ನ ಭುಜದ ಮೇಲೆ ನಿಂತು ಕಾಲಿನಿಂದ ತುಳಿದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.